# ಮೈಸೂರು ವಿಶ್ವವಿದ್ಯಾನಿಲಯ

**ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ದಿನಾಂಕ 16-11-2018ರಂದು ಬೆಳಿಗ್ಗೆ 11.00 ಗಂಟೆಗೆ ಜರುಗಿದ ಆರನೇ ಸಿಂಡಿಕೇಟ್ ಸಭೆಯ ನಡವಳಿಗಳು.**

**ಹಾಜರಿದ್ದ ಸದಸ್ಯರು:**

1. ಪ್ರೊ. ಆಯಿಷಾ ಎಂ. ಷರೀಫ್ – ಕುಲಪತಿಗಳು(ಪ್ರಭಾರ) ಹಾಗೂ ಅಧ್ಯಕ್ಷರು
2. ಕು. ಸಹನಾ ಶಿವಪ್ಪ – ಸದಸ್ಯರು
3. ಪ್ರೊ. ಎಸ್.ಎಲ್. ಸುರೇಶ್ – ಸದಸ್ಯರು
4. ಡಾ. ರಾಜಗೋಪಾಲ್ – ಸದಸ್ಯರು
5. ಡಾ. ಎ.ಟಿ. ಶಿವರಾಮು – ಸದಸ್ಯರು
6. ಡಾ. ಎಂ. ಪ್ರೀತಿ – ಸದಸ್ಯರು
7. ಪ್ರೊ. ಜೆ. ಸೋಮಶೇಖರ್ ಕುಲಸಚಿವ(ಪರೀಕ್ಷಾಂಗ) – ಸದಸ್ಯರು
8. ಪ್ರೊ.ಆರ್.ರಾಜಣ್ಣ – ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು

**ಹಾಜರಾಗದ ಸದಸ್ಯರು:**

1. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
2. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
3. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
4. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
5. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.

ಮೊದಲಿಗೆ ಮಾನ್ಯ ಕುಲಸಚಿವರು, ಸಿಂಡಿಕೇಟ್‌ನ ಆರನೇ ಸಾಮಾನ್ಯ ಸಭೆಗೆ ಆಗಮಿಸಿದ್ದ ಎಲ್ಲಾ ಸದಸ್ಯರುಗಳನ್ನು ಹಾಗೂ ಈ ಸಭೆಯ ಅಧ್ಯಕ್ಷತೆ ವಹಿಸಿಕೊಂಡಿರುವ ಪ್ರೊ. ಆಯಿಷಾ ಎಂ. ಷರೀಫ್ ಕುಲಪತಿಗಳು ಇವರನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿದರು. ನಂತರ ಸಭೆಯಲ್ಲಿ ಮಂಡಿಸಲಾಗಿರುವ ವಿಷಯಗಳ ಬಗ್ಗೆ ಮಾನ್ಯ ಕುಲಸಚಿವರು ವಿಷಯ ಮಂಡನೆ ಮಾಡಲು ಸಭೆಯನ್ನು ಕೋರಿದರು.

ನಂತರ ಕಾರ್ಯಸೂಚಿಯನ್ನು ಕೈಗೆತ್ತಿಕೊಳ್ಳಲಾಯಿತು.

| ವಿಷಯ ಸಂಖ್ಯೆ | ವಿಷಯ ಸಂಕ್ಷಿಪ್ತವಾಗಿ |
|---|---|
| **ವಿಷಯ ಸಂಖ್ಯೆ:** I | ದಿನಾಂಕ 05-10-2018ರಂದು ನಡೆದ ಸಿಂಡಿಕೇಟಿನ ಐದನೇ ಸಾಮಾನ್ಯ ಸಭೆಯ ನಡಾವಳಿಗಳನ್ನು ದೃಢೀಕರಿಸುವ ಬಗ್ಗೆ |
| **ತೀರ್ಮಾನ** | ವಿಷಯ ಸಂಖ್ಯೆ 2018/10.22ರ ತೀರ್ಮಾನಕ್ಕೆ ಸಂಬಂಧಿಸಿದಂತೆ ಡಾ. ರಾಜಗೋಪಾಲ್, ಪ್ರಾಂಶುಪಾಲರು, ವಿದ್ಯಾವಿಕಾಸ ಬಿ.ಇಡಿ. ಕಾಲೇಜು, ಮೈಸೂರು ಸಿಂಡಿಕೇಟ್ ಹಾಗೂ ಅಕಾಡೆಮಿಕ್ ಕೌನ್ಸಿಲ್ ಇವರು ದಿನಾಂಕ 12-11-2018ರಂದು ಪತ್ರ ಮುಖೇನ ತಿಳಿಸಿರುವಂತೆ "ಸುದೀರ್ಘ ಚರ್ಚೆಯ ನಂತರ ಸ್ನಾತಕೋತ್ತರ ಶಿಕ್ಷಣ ಮಂಡಳಿಯ ಅಧ್ಯಕ್ಷರನ್ನೇ ಸ್ನಾತಕ ಶಿಕ್ಷಣ ಮಂಡಳಿಗೂ ಪದನಿಮಿತ್ತ ಅಧ್ಯಕ್ಷರನ್ನಾಗಿ ನೇಮಿಸಿ ಸದರಿ ಮಂಡಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಬಿ.ಇಡಿ. ಕಾಲೇಜಿನ ವಿಷಯ ಪರಿಣಿತರ ಅಧ್ಯಾಪಕರನ್ನು ನಿಯಮಾನುಸಾರ ಸೇರ್ಪಡೆ ಮಾಡಿಕೊಳ್ಳಲು ಹಾಗೂ ಅವಶ್ಯವಿದ್ದಲ್ಲಿ |

| | |
|---|---|
| | ಮತ್ತಿಬ್ಬರು ವಿಶೇಷ ಆಹ್ವಾನಿತರನ್ನು ಸೇರ್ಪಡೆ ಮಾಡಿಕೊಂಡು ಸ್ನಾತಕ ಶಿಕ್ಷಣ ಮಂಡಳಿಯನ್ನು ರಚಿಸಲು ಹಾಗೂ ಸ್ನಾತಕೋತ್ತರ ಶಿಕ್ಷಣ ಮಂಡಳಿಯನ್ನು ನಿಯಮಾನುಸಾರ ರಚಿಸುವ ಅಧಿಕಾರವನ್ನು ಸಿಂಡಿಕೇಟ್ ಮಾನ್ಯ ಕುಲಪತಿಗಳಿಗೆ ನೀಡಲು ತೀರ್ಮಾನಿಸಿತು" ಎಂಬುದರ ಬದಲಿಗೆ **"ಸುದೀರ್ಘ ಚರ್ಚೆಯ ನಂತರ ಸ್ನಾತಕೋತ್ತರ ಶಿಕ್ಷಣ ಮಂಡಳಿಯ ಅಧ್ಯಕ್ಷರನ್ನೇ ಸ್ನಾತಕ ಶಿಕ್ಷಣ ಮಂಡಳಿಗೂ ಪದನಿಮಿತ್ತ ಅಧ್ಯಕ್ಷರನ್ನಾಗಿ ನೇಮಿಸಿ ಸದರಿ ಮಂಡಳಿಗೆ ಹೆಚ್ಚುವರಿಯಾಗಿ ಇಬ್ಬರು ವಿಷಯ ಪರಿಣತ ಅಧ್ಯಾಪಕರನ್ನು ಸೇರ್ಪಡೆ ಮಾಡಿಕೊಂಡು ಸ್ನಾತಕ ಶಿಕ್ಷಣ ಮಂಡಳಿಯನ್ನು ರಚಿಸಲು ಹಾಗೂ ಸ್ನಾತಕೋತ್ತರ ಶಿಕ್ಷಣ ಮಂಡಳಿಯನ್ನು ನಿಯಮಾನುಸಾರ ರಚಿಸುವ ಅಧಿಕಾರವನ್ನು ಸಿಂಡಿಕೇಟ್ ಮಾನ್ಯ ಕುಲಪತಿಗಳಿಗೆ ನೀಡಲು ತೀರ್ಮಾನಿಸಿತು**<br><br>**ಮತ್ತು ಬಿ.ಇಡಿ. ಕಾಲೇಜುಗಳ ಗುಣಮಟ್ಟದ ಮೌಲ್ಯಾಂಕನಕ್ಕೆ ರಚಿಸಲಾಗುವ ಎರಡು MAAC ತಂಡದಲ್ಲಿ ಹಿರಿತನದ ಆಧಾರದ ಮೇಲೆ ಬಿ.ಇಡಿ. ಕಾಲೇಜು ಪ್ರಾಂಶುಪಾಲರನ್ನು ಪ್ರತಿ ತಂಡದಲ್ಲಿ ಅಧ್ಯಕ್ಷರನ್ನಾಗಿ ನೇಮಿಸುವುದು ಹಾಗೂ ಒಬ್ಬರು ಪ್ರಾಂಶುಪಾಲರು ಮತ್ತು ಇಬ್ಬರು ಬಿ.ಇಡಿ. ಕಾಲೇಜು ಪ್ರಾಧ್ಯಾಪಕರುಗಳನ್ನು ಹಿರಿತನದ ಆಧಾರದ ಮೇಲೆ ಸದಸ್ಯರನ್ನಾಗಿ ಆಯ್ಕೆ ಮಾಡಿ 4 ಸದಸ್ಯರ ತಂಡ ರಚಿಸಲು ಸಿಂಡಿಕೇಟ್ ತೀರ್ಮಾನಿಸಿತು"** ಎಂಬ ತಿದ್ದುಪಡಿಯನ್ನು ಸೇರ್ಪಡೆಮಾಡಿಕೊಳ್ಳಲು ತೀರ್ಮಾನಿಸಿತು.<br><br>ಉಳಿದಂತೆ ದಿನಾಂಕ 05-10-2018ರಂದು ನಡೆದ ಸಿಂಡಿಕೇಟಿನ ಐದನೇ ಸಾಮಾನ್ಯ ಸಭೆಯ ನಡಾವಳಿಗಳನ್ನು ದೃಢೀಕರಿಸಲಾಯಿತು. |
| **ವಿಷಯ ಸಂಖ್ಯೆ: II** | ದಿನಾಂಕ 05-10-2018ರಂದು ನಡೆದ ಸಿಂಡಿಕೇಟಿನ ಐದನೇ ಸಾಮಾನ್ಯ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳ ಬಗ್ಗೆ ಕ್ರಮ ಕೈಗೊಂಡ ವರದಿ. |
| **ತೀರ್ಮಾನ** | ವರದಿಯನ್ನು ಗಮನಿಸಲಾಯಿತು. |
| 2018/11.1 | ಶುಲ್ಕಗಳನ್ನು "Waive-off" ಮಾಡುವ ಬಗ್ಗೆ. |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಪದವಿಯ ತಳಿಶಾಸ್ತ್ರ ಅಧ್ಯಯನ ವಿಭಾಗದಲ್ಲಿ 2015-16 ಹಾಗೂ 2016-17ನೇ ಶೈಕ್ಷಣಿಕ ಸಾಲಿನಲ್ಲಿ ವ್ಯಾಸಂಗ ಮಾಡಿರುವ 07 ವಿದ್ಯಾರ್ಥಿಗಳು ಪಾವತಿಸಬೇಕಾಗಿರುವ ಹಣವನ್ನು "Waive-off" ಮಾಡುವಂತೆ ಕೋರಿರುವುದನ್ನು ಪರಿಶೀಲಿಸಿದ ಸಿಂಡಿಕೇಟ್ ಇತ್ತೀಚಿನ ವರ್ಷದಲ್ಲಿ ಸ್ಥಾಪಿತಗೊಂಡಿರುವ ಈ ಅಧ್ಯಯನ ವಿಭಾಗದಲ್ಲಿನ ಕೋರ್ಸ್‌ಗಳು ಸ್ವಯಂ ಹಣಕಾಸು ಕೋರ್ಸುಗಳಾಗಿರುವುದರಿಂದ ವಿಶ್ವವಿದ್ಯಾನಿಲಯದ ಆಂತರಿಕ ಸಂಪನ್ಮೂಲಗಳಿಂದ ಭರಿಸಲು ಸಾಧ್ಯವಾಗದಿರುವುದರಿಂದ ವಿದ್ಯಾರ್ಥಿಗಳು ಪಾವತಿಸಬೇಕಾಗಿರುವ ಹಣವನ್ನು "Waive-off" ಮಾಡದಿರಲು ಸಿಂಡಿಕೇಟ್ ತೀರ್ಮಾನಿಸಿತು. |
| 2018/11.2 | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಶ್ರೀ ಬಸವೇಶ್ವರ ಸಾಮಾಜಿಕ ಪರಿಷ್ಕರಣ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ ಸ್ಥಾಪಿಸುವ ಬಗ್ಗೆ ಸಿದ್ಧಪಡಿಸಿರುವ ಪರಿಷ್ಕೃತ ಪರಿನಿಯಮಾವಳಿಯ ಅನುಮೋದನೆಗಾಗಿ |
| **ತೀರ್ಮಾನ** | ಸರ್ಕಾರದ ನಿರ್ದೇಶನದಂತೆ ಪರಿಷ್ಕರಿಸಿ ಸಿದ್ಧಪಡಿಸಿರುವ ಕರಡು ಪರಿನಿಯಮಾವಳಿಯನ್ನು ಸಿಂಡಿಕೇಟ್ ಅನುಮೋದಿಸಿತು. |
| 2018/11.3 | ಶೈಕ್ಷಣಿಕ ಬಹುಮಾಧ್ಯಮ ಕೇಂದ್ರದ ನಿರ್ದೇಶಕರ ನೇಮಕಾತಿ ಬಗ್ಗೆ. |
| **ತೀರ್ಮಾನ** | Consortium for Educational Communication(CEC), New Delhi ಇದರ ನಿರ್ದೇಶಕರು ದಿನಾಂಕ: 15-10-2018ರ ತಮ್ಮ ಪತ್ರದಲ್ಲಿ ತಿಳಿಸಿರುವಂತೆ ಶೈಕ್ಷಣಿಕ ಬಹುಮಾಧ್ಯಮ ಕೇಂದ್ರದ ನಿರ್ದೇಶಕರ ಹುದ್ದೆಯನ್ನು ಭರ್ತಿಮಾಡುವ ಸಂಬಂಧ ಪ್ರಕಟಣೆ ಹೊರಡಿಸಿ ನೇರ ನೇಮಕಾತಿಯ ಮೂಲಕ ಅರ್ಹ ಅಭ್ಯರ್ಥಿಗಳನ್ನು ಯು.ಜಿ.ಸಿ./ಸಿ.ಇ.ಸಿ. ಮಾರ್ಗಸೂಚಿ ಅನ್ವಯ ಭರ್ತಿ ಮಾಡಲು ಸಿಂಡಿಕೇಟ್ ಅನುಮೋದಿಸಿತು. |

| | |
|---|---|
| 2018/11.4 | ವಿಶ್ವವಿದ್ಯಾನಿಲಯವು ನೀಡಿರುವ ಸಿ.ಎ.ಎಸ್., ಪದೋನ್ನತಿಯ ಅರ್ಹತಾ ದಿನಾಂಕಗಳನ್ನು ಮರುಪರಿಶೀಲಿಸುವಂತೆ ಕೋರಿ ಕೆಲವು ಅಧ್ಯಾಪಕರುಗಳು ಸಲ್ಲಿಸಿರುವ ಮನವಿಯ ಬಗ್ಗೆ. |
| | ಮಾನ್ಯ ಕುಲಪತಿಗಳು ಮಾತನಾಡಿ ಸಹಾಯಕ ಪ್ರಾಧ್ಯಾಪಕ ಹುದ್ದೆಗೆ ಸೇರುವಾಗ ನೆಟ್/ಸ್ಲೆಟ್/ಪಿಎಚ್.ಡಿ. ಹೊಂದಿರುವವರಿಗೆ 4 ವರ್ಷಗಳಿಗೆ ನೆಟ್/ಸ್ಲೆಟ್/ಎಂ.ಫಿಲ್. ಹೊಂದಿರುವವರಿಗೆ 5 ವರ್ಷಕ್ಕೆ ಮತ್ತು ಯಾವ ಅಧ್ಯಾಪಕರು ಪಿಎಚ್.ಡಿ. ಪದವಿಯ ಅರ್ಹತೆಯನ್ನು ಮಾತ್ರ ನೇಮಕಾತಿ ಸಮಯದಲ್ಲಿ ಹೊಂದಿದ್ದಲ್ಲಿ ಅಂತಹವರಿಗೆ ನೇಮಕಗೊಂಡ ದಿನಾಂಕದಿಂದ 6 ವರ್ಷಗಳಿಗೆ ಸಿ.ಎ.ಎಸ್., ನಲ್ಲಿ ಸ್ಥಾನೀಕರಣ–ಗೊಳಿಸಲಾಗಿದೆ. ಆದರೆ ಕೆಲವು ಪ್ರಾಧ್ಯಾಪಕರು ಪದೋನ್ನತಿಯ ಅರ್ಹತಾ ದಿನಾಂಕಗಳನ್ನು ಮರುಪರಿಶೀಲಿಸುವಂತೆ ಕೋರಿರುತ್ತಾರೆ. ಕಾರ್ಯಸೂಚಿಯಲ್ಲಿ ಸಂಪೂರ್ಣ ವಿವರಗಳನ್ನು ಮಂಡಿಸಲಾಗಿದೆ. ಯು.ಜಿ.ಸಿ.ನಿಯಮ ಸರ್ಕಾರದ ನಿರ್ದೇಶನ/ಆದೇಶಗಳನ್ನು ಪರಿಶೀಲಿಸಿದಾಗ ಗೊಂದಲವಿರುವುದು ಕಂಡುಬರುತ್ತದೆ ಮತ್ತು ಅಧಿನಿಯಮವನ್ನು ತಪ್ಪಾಗಿ ವ್ಯಾಖ್ಯಾನಿಸಿ ಕ್ರಮಕೈಗೊಂಡಲ್ಲಿ ಅಂತಹವರ ಬಗ್ಗೆ ಶಿಸ್ತುಕ್ರಮ ಜರುಗಿಸಲಾಗುವುದೆಂಬ ಅಂಶಗಳಿರುವುದರಿಂದ ತಾವು ಈ ಬಗ್ಗೆ ಯುಜಿಸಿ.ಗೆ ಸ್ಪಷ್ಟೀಕರಣಕ್ಕಾಗಿ ಪತ್ರ ಬರೆಯುವುದು ಸೂಕ್ತವಾಗಿದೆಯೆಂದು ಅಭಿಪ್ರಾಯಪಟ್ಟರು.<br>ಸುದೀರ್ಘ ಚರ್ಚೆಯ ನಂತರ 2010ರಲ್ಲಿ ವಿಶ್ವವಿದ್ಯಾನಿಲಯವು ಹೊರಡಿಸಿದ್ದ ಪ್ರಕಟಣೆಗೆ ಎದುರಾಗಿ ಅರ್ಹ ಅಧ್ಯಾಪಕರು ಸಿ.ಎ.ಎಸ್. ಅಡಿಯಲ್ಲಿ ಅರ್ಜಿಸಲ್ಲಿಸಿರುವುದರಿಂದ ಯು.ಜಿ.ಸಿ. ರೆಗ್ಯೂಲೇಷನ್ಸ್‌ನಂತೆ ಕ್ರಮಕೈಗೊಳ್ಳುವುದು ಸೂಕ್ತವಾಗಿದೆ. ಯು.ಜಿ.ಸಿ./ ಸರ್ಕಾರಕ್ಕೆ ಪತ್ರ ಬರೆದಲ್ಲಿ ಪದೋನ್ನತಿ ಸೌಲಭ್ಯ ನೀಡಲು ವಿಳಂಬವಾಗುತ್ತದೆ. ಆದ್ದರಿಂದ ಸಂಶೋಧನೆ ಮತ್ತು ಬೋಧನೆಯ ಕ್ಷೇತ್ರದಲ್ಲಿ ಸಂಪೂರ್ಣವಾಗಿ ತೊಡಗಿಕೊಳ್ಳಲು ಪ್ರೋತ್ಸಾಹಿಸಬೇಕಾಗಿರುವುದರಿಂದ ಅರ್ಹ ಅಧ್ಯಾಪಕರಿಗೆ ಸಲ್ಲಬೇಕಾದ ಸೌಲಭ್ಯಗಳನ್ನು ಷರತ್ತುಬದ್ಧವಾಗಿ ವಿಸ್ತರಿಸಲು ಸಿಂಡಿಕೇಟ್‌ನ ಇತರ ಎಲ್ಲಾ ಸದಸ್ಯರು ಅಭಿಪ್ರಾಯಿಸಿದರು. |
| **ತೀರ್ಮಾನ** | 2007ನೇ ವರ್ಷದಲ್ಲಿ ನೇಮಕಾತಿ ಹೊಂದಿರುವ ಕೆಲವು ಅಧ್ಯಾಪಕರು 2010ರಲ್ಲಿ ಪ್ರಕಟಣೆ ಹೊರಡಿಸಿರುವ ಅನ್ವಯ ಪದೋನ್ನತಿಗಾಗಿ ಅರ್ಜಿ ಸಲ್ಲಿಸಿದ್ದು ಈ ಹಿಂದೆ ಇದ್ದ ಯುಜಿಸಿ ನಿಯಮಗಳ ಅನ್ವಯ ಅವರು ಕೋರಿರುವಂತೆ ವಿನಾಯಿತಿನೀಡಿ ಸಿ.ಎ.ಎಸ್. ಅಡಿಯಲ್ಲಿ, ಸೂಕ್ತವಾದ ಮುಚ್ಚಳಿಕೆಯೊಂದಿಗೆ ಷರತ್ತುಬದ್ಧ ಪದೋನ್ನತಿಯನ್ನು ನೀಡಿ ತದನಂತರ ಯುಜಿಸಿ/ಸರ್ಕಾರಕ್ಕೆ ಸ್ಪಷ್ಟೀಕರಣಕ್ಕಾಗಿ ಪತ್ರ ಬರೆಯಲು ಸಿಂಡಿಕೇಟ್ ತೀರ್ಮಾನಿಸಿತು. |
| 2018/11.5 | ಚಾಮರಾಜನಗರ ಸ್ನಾತಕೋತ್ತರ ಕೇಂದ್ರದಲ್ಲಿನ ಎರಡು ನೂತನ ಕಟ್ಟಡಗಳಿಗೆ "ನಿಜಗುಣ ಸಭಾಂಗಣ" ಮತ್ತು ಗ್ರಂಥಾಲಯಕ್ಕೆ "ಸಾವಿತ್ರಿ ಬಾಪುಲೆ" ಎಂದು ನಾಮಾಂಕಿತವನ್ನು ಇಡುವ ಬಗ್ಗೆ. |
| **ತೀರ್ಮಾನ** | ಚಾಮರಾಜನಗರ ಸ್ನಾತಕೋತ್ತರ ಕೇಂದ್ರದ ಎರಡು ನೂತನ ಕಟ್ಟಡಗಳಿಗೆ "ನಿಜಗುಣ ಸಭಾಂಗಣ" ಮತ್ತು ಗ್ರಂಥಾಲಯಕ್ಕೆ "ಸಾವಿತ್ರಿ ಬಾಪುಲೆ" ಎಂದು ನಾಮಾಂಕಿತವನ್ನು ಮಾಡುವ ನಿರ್ದೇಶಕರ ಮನವಿಯನ್ನು ಸಿಂಡಿಕೇಟ್ ತಿರಸ್ಕರಿಸಿತು. |
| 2018/11.6 | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ನೇರನೇಮಕಾತಿ ಬ್ಯಾಕ್‌ಲಾಗ್ ಹುದ್ದೆಗಳ ಮಾಹಿತಿಯನ್ನು ಸರ್ಕಾರಕ್ಕೆ ನೀಡಿರುವ ಬಗ್ಗೆ. |
| | ಕುಲಸಚಿವರು ಮಾತನಾಡಿ ತುರ್ತಾಗಿ ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಬೇಕಾಗಿರುವುದರಿಂದ ಸರ್ಕಾರದ ಕಾರ್ಯದರ್ಶಿಗಳನ್ನು 16–10–2018ರಂದು ಖುದ್ದಾಗಿ ಭೇಟಿಮಾಡಿ ಸ್ಪಷ್ಟೀಕರಣ ನೀಡಿ ಪತ್ರ ಬರೆದು ಆದಷ್ಟು ಬೇಗನೇ ಅನುಮತಿ ನೀಡುವಂತೆ ಕೋರಿರುತ್ತೇನೆಂದು ಸಭೆಗೆ ತಿಳಿಸಿ, ಸಭೆಯು ಇದನ್ನು ಅನುಮೋದಿಸಬೇಕೆಂದರು. |

| | |
|---|---|
| | ಕುಲಸಚಿವ (ಪರೀಕ್ಷಾಂಗ) ಅವರು ಮಾತನಾಡಿ ಒಂದೊಂದು ಸಮಿತಿಯು ಭೇಟಿ ನೀಡಿದಾಗಲೂ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿಮಾಡಿಕೊಳ್ಳಲು ಒಂದೊಂದು ವರದಿಯನ್ನು ಸಲ್ಲಿಸಿವೆ. ಆದ್ದರಿಂದ ಇತ್ತೀಚಿನ ವರದಿಯನ್ನು ಪರಿಗಣಿಸಬೇಕೆಂದು ಕೋರಿದರು.<br><br>ಕುಲಸಚಿವರಾದ ಪ್ರೊ. ರಾಜಣ್ಣನವರು ಸ್ಪಷ್ಟೀಕರಿಸುತ್ತಾ, ಇತ್ತೀಚೆಗೆ ನೀಡಿದ ವರದಿಯಲ್ಲಿ 2007ರಲ್ಲಿ ನೇಮಕಗೊಂಡಿರುವ ಬ್ಯಾಕ್‌ಲಾಗ್ ಹುದ್ದೆಗಳನ್ನು ಪರಿಗಣಿಸದೇ ಅದನ್ನು ಲೆಕ್ಕಹಾಕಿ 76 ಬ್ಯಾಕ್‌ಲಾಗ್ ಹುದ್ದೆಗಳೆಂದು ಗುರುತಿಸಲಾಗಿರುವುದರಿಂದ ಅದನ್ನು ಪರಿಗಣಿಸಲು ಬರುವುದಿಲ್ಲ. ಆದ್ದರಿಂದ ಸಂಪೂರ್ಣ ಮಾಹಿತಿಯೊಂದಿಗೆ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ ಎಂದು ತಿಳಿಸಿದರು.<br><br>ಸಭೆಯಲ್ಲಿ ಸುದೀರ್ಘವಾಗಿ ಚರ್ಚೆಯಾದ ನಂತರ ಸಿಂಡಿಕೇಟ್ ಈ ಕೆಳಗಿನಂತೆ ತೀರ್ಮಾನಿಸಿತು. |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ನೇರನೇಮಕಾತಿ ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿ ಮಾಡುವ ಕುರಿತಂತೆ ದಿನಾಂಕ 13–03–2018ರಂದು ಸಲ್ಲಿಸಿರುವ ವರದಿಯಲ್ಲಿ 76 ಬ್ಯಾಕ್‌ಲಾಗ್ ಹುದ್ದೆಗಳನ್ನು ಗುರುತಿಸಲಾಗಿದೆ. ಇದರ ಬದಲಿಗೆ ಈ ಹಿಂದೆ ಈಗಾಗಲೇ 55 ಹುದ್ದೆಗಳನ್ನು ಗುರುತಿಸಿ ವರದಿ ಸಲ್ಲಿಸಿರುವ ಅನುಸಾರ ದಿನಾಂಕ 27–02–2016ರಂದು ಪ್ರಕಟಣೆ ಹೊರಡಿಸಲಾಗಿದೆ. ಅದರಂತೆ ಭರ್ತಿ ಮಾಡಿಕೊಳ್ಳಲು 16–10–2018ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿ (ಶಿಕ್ಷಣ ಇಲಾಖೆ) ಹಾಗೂ ಸರ್ಕಾರದ ಅಪರ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಅವರಿಗೆ ಅನುಮತಿ ಕೋರಿ ಬರೆದಿರುವ ಪತ್ರವನ್ನು ಸಿಂಡಿಕೇಟ್ ಗಮನಿಸಿತು. ಸರ್ಕಾರದಿಂದ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿಮಾಡುವಂತೆ ಅನುಮತಿ ಬಂದನಂತರ ಮುಂದಿನ ಕ್ರಮಕೈಗೊಳ್ಳುವ ಸಲುವಾಗಿ ಸಿಂಡಿಕೇಟ್‌ಗೆ ವಿಷಯ ಮಂಡಿಸಲು ತೀರ್ಮಾನಿಸಲಾಯಿತು. |
| 2018/11.7 | 2018–19ನೇ ಶೈಕ್ಷಣಿಕ ಸಾಲಿಗೆ ಶಿಕ್ಷಣ ಕಾಲೇಜುಗಳಿಗೆ ಪುನರ್ ಪರಿಶೀಲನಾ ಸಮಿತಿಯ ಶಿಫಾರಸ್ಸಿನ ಆಧಾರ ಒಂದು ಸೆಕ್ಷನ್ ಬದಲಿಗೆ ಎರಡು ಸೆಕ್ಷನ್ 100 ಸಂಖ್ಯೆ ವಿದ್ಯಾರ್ಥಿಗಳ ಪ್ರವೇಶಾತಿಗೆ ವಿಸ್ತರಣಾ ಸಂಯೋಜನಾ ಆದೇಶ ಹೊರಡಿಸಿರುವುದರ ಕುರಿತು ಅನುಸಮರ್ಥನೆ ಬಗ್ಗೆ. |
| **ತೀರ್ಮಾನ** | 2018–19ನೇ ಶೈಕ್ಷಣಿಕ ಸಾಲಿಗೆ ಶಿಕ್ಷಣ ಕಾಲೇಜುಗಳಿಗೆ ಪುನರ್ ಪರಿಶೀಲನಾ ಸಮಿತಿಯ ಶಿಫಾರಸ್ಸಿನ ಆಧಾರ ಒಂದು ಸೆಕ್ಷನ್ ಬದಲಿಗೆ ಎರಡು ಸೆಕ್ಷನ್ 100 ಸಂಖ್ಯೆ ವಿದ್ಯಾರ್ಥಿಗಳ ಪ್ರವೇಶಾತಿಗೆ ವಿಸ್ತರಣಾ ಸಂಯೋಜನಾ ಆದೇಶ ಹೊರಡಿಸಿರುವುದನ್ನು ಅನುಸಮರ್ಥಿಸಿತು. ಮುಂದುವರೆದು ಸದರಿ ಕಾಲೇಜುಗಳು ಎನ್‌ಸಿಟಿಇ ಎಲ್ಲಾ ನಿಯಮಗಳನ್ನು ಪಾಲಿಸತಕ್ಕದ್ದು ಎಂಬ ಷರತ್ತು ವಿಧಿಸಲು ಸಿಂಡಿಕೇಟ್ ತೀರ್ಮಾನಿಸಿತು.<br><br>ಮತ್ತು ಮಾನ್ಯ ಕುಲಪತಿಗಳಿಗೆ ರಚಿತಗೊಂಡ ಒಂದು ಸಮಿತಿಯು, ವಿಶ್ವವಿದ್ಯಾನಿಲಯ ಮತ್ತು ಎನ್‌ಸಿಟಿಇ ನಿಯಮಗಳನ್ನು ತಪ್ಪದೇ ಪಾಲಿಸಲಾಗುತ್ತಿದೆಯೇ ಎಂಬುದರ ಬಗ್ಗೆ ಎಲ್ಲಾ ಕಾಲೇಜುಗಳಿಗೆ ಅನಿರೀಕ್ಷಿತ ಭೇಟಿ ನೀಡಿ ಪರಿಶೀಲಿಸಿ ವರದಿ ಸಲ್ಲಿಸಲು ಸಹ ಸಿಂಡಿಕೇಟ್ ತೀರ್ಮಾನಿಸಿತು. |
| 2018/11.8 | ಸಾವಯವ ರಸಾಯನಶಾಸ್ತ್ರ (ಆರ್ಗ್ಯಾನಿಕ್ ಕೆಮಿಸ್ಟ್ರಿ) ಮತ್ತು ಭೂ ವಿಜ್ಞಾನ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಿಸುವ ಬಗ್ಗೆ |
| **ತೀರ್ಮಾನ** | ಪ್ರೊ. ಶಶಿಕಾಂತ್ ಎಸ್. ರಸಾಯನಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ದಿನಾಂಕ 31–10–2018ರಂದು ಸೇವೆಯಿಂದ ವಯೋನಿವೃತ್ತಿಯನ್ನು ಹೊಂದಿರುವುದರಿಂದ ಮತ್ತು ಸಾವಯವ ರಸಾಯನಶಾಸ್ತ್ರ (ಆರ್ಗ್ಯಾನಿಕ್ ಕೆಮಿಸ್ಟ್ರಿ) ಅಧ್ಯಯನ ವಿಭಾಗವು ಪ್ರತ್ಯೇಕವಾಗಿ ಸ್ಥಾಪಿತಗೊಂಡ ವಿಭಾಗವಾಗಿರುವುದರಿಂದ ಈ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಡಾ. ಬಸಪ್ಪ, ಸಹಾಯಕ ಪ್ರಾಧ್ಯಾಪಕರು |

| | |
|---|---|
| | ಇವರನ್ನು ತಕ್ಷಣದಿಂದ ಜಾರಿಗೆ ಬಂದಂತೆ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶ ನೀಡುವವರೆಗೆ ಅಧ್ಯಕ್ಷರನ್ನಾಗಿ ನೇಮಕಮಾಡಲು ಸಿಂಡಿಕೇಟ್ ಅನುಮೋದಿಸಿತು.<br>ಪ್ರೊ. ಕೆ.ಜಿ.ಆಶಾಮಂಜರಿ, ಭೂವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು – ಇವರ ವಿಭಾಗದ ಅಧ್ಯಕ್ಷರ ಅವಧಿಯು ದಿನಾಂಕ 20–11–2018ಕ್ಕೆ ಅಂತ್ಯಗೊಳ್ಳುತ್ತಿದ್ದು ಅವರ ನಂತರ ಜೇಷ್ಠತೆಯಲ್ಲಿ ಹಿರಿಯರಾಗಿರುವ ಪ್ರೊ. ಎಂ.ಎಸ್.ಸೇತುಮಾಧವ, ಪ್ರಾಧ್ಯಾಪಕರು ಇವರನ್ನು ಭೂವಿಜ್ಞಾನ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ದಿನಾಂಕ 21–11–2018ರಿಂದ ಜಾರಿಗೆ ಬಂದಂತೆ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶ ನೀಡುವವರೆಗೆ ಅಧ್ಯಕ್ಷರನ್ನಾಗಿ ನೇಮಕಮಾಡಲು ಸಿಂಡಿಕೇಟ್ ಅನುಮೋದಿಸಿತು. |
| 2018/11.9 | ಪರೀಕ್ಷಾ ಕಾರ್ಯ ಹಾಗೂ ಕಛೇರಿ ತುರ್ತು ಕೆಲಸಗಳಿಗೆ ಬಾಡಿಗೆ ವಾಹನಗಳನ್ನು ಪಡೆಯುವ ಸಂಬಂಧ ಹಾಲಿ ಟೆಂಡರ್‌ದಾರರನ್ನು ಮುಂದುವರೆಸಿರುವ ವಿಷಯವನ್ನು ಸಿಂಡಿಕೇಟ್ ಸಭೆಗೆ "ಅನುಸಮರ್ಥನೆಗಾಗಿ" ಮಂಡಿಸುವ ಬಗೆಗೆ |
| **ತೀರ್ಮಾನ** | "ಮೆ: ಕಾವೇರಿ ಟೂರ್ಸ್ ಅಂಡ್ ಟ್ರಾವೆಲ್ಸ್", ಕುವೆಂಪುನಗರ, ಮೈಸೂರು ಅವರಿಂದಲೇ ಪರೀಕ್ಷಾ ಕಾರ್ಯ ಹಾಗೂ ಕಛೇರಿ ತುರ್ತು ಕೆಲಸಗಳಿಗೆ ಬಾಡಿಗೆ ವಾಹನಗಳನ್ನು ಈಗಾಗಲೇ ಮಾಡಿಕೊಂಡಿರುವ ಒಡಂಬಡಿಕೆಯಂತೆ ದರ ಪರಿಷ್ಕರಣೆ ಮಾಡದೆ ಮುಂದಿನ ಟೆಂಡರ್‌ನ ಯಶಸ್ವಿ ಬಿಡ್‌ದಾರರಿಗೆ ಆದೇಶ ನೀಡುವವರೆಗೆ ಮುಂದುವರೆಸಿರುವುದನ್ನು ಸಿಂಡಿಕೇಟ್ ಅನುಸಮರ್ಥಿಸಿತು. |
| 2018/11.10 | 2014–2015ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕ ಪರಿಶೋಧನಾ ವರದಿಯ ಆಕ್ಷೇಪಣೆಗಳಿಗೆ ಉತ್ತರವನ್ನು ಸಿದ್ಧಪಡಿಸಿರುವ ಬಗ್ಗೆ |
| **ತೀರ್ಮಾನ** | ಅನುಮೋದಿಸಲಾಯಿತು. |
| 2018/11.11 | ಶ್ರೀ ಆರ್. ಗಣೇಶ್, ದ್ವಿತೀಯ ದರ್ಜೆ ಗುಮಾಸ್ತರು, ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ, ಮಾನಸಗಂಗೋತ್ರಿ, ಮೈಸೂರು ಇವರ ಅನಧಿಕೃತ ಗೈರುಹಾಜರಿಯ ಸಂಬಂಧ ಶಿಸ್ತುಕ್ರಮ ಜರುಗಿಸುವ ಬಗ್ಗೆ. |
| **ತೀರ್ಮಾನ** | ಸುದೀರ್ಘ ಚರ್ಚೆಯ ನಂತರ ಶ್ರೀ ಆರ್. ಗಣೇಶ್, ದ್ವಿತೀಯ ದರ್ಜೆ ಗುಮಾಸ್ತರು, ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ, ಮಾನಸಗಂಗೋತ್ರಿ, ಮೈಸೂರು ಇವರ ಮೇಲಿನ ಆರೋಪಗಳು ಸಾಬೀತಾಗಿರುವುದನ್ನು ವರದಿಯಲ್ಲಿ ದಾಖಲಾಗಿರುವುದನ್ನು ಗಮನಿಸಿದ ಸಿಂಡಿಕೇಟ್ ಈ ಬಾರಿಗೆ ಕ್ಷಮಿಸಿ ಮುಂದಿನ ವೇತನಬಡ್ತಿಗಳಿಗೆ ಧಕ್ಕೆಯಾಗದಂತೆ ಒಂದು ವೇತನಬಡ್ತಿಯನ್ನು ತಡೆಹಿಡಿಯಲು ಹಾಗೂ ಸದರಿಯವರಿಗೆ ಅಂತಿಮ ಎಚ್ಚರಿಕೆ ನೀಡಿ ಮುಂದೆ ಅನಧಿಕೃತ ಗೈರುಹಾಜರಾಗಿರುವುದರ ಬಗ್ಗೆ ದೂರು ದಾಖಲಾದಲ್ಲಿ ಯಾವುದೇ ವಿಚಾರಣೆಯಿಲ್ಲದೆ ಶಿಸ್ತುಪ್ರಾಧಿಕಾರವಾದ ಸಿಂಡಿಕೇಟ್‌ನ ತೀರ್ಮಾನದಂತೆ ಕ್ರಮಕೈಗೊಳ್ಳಲು ಸಹ ಸಿಂಡಿಕೇಟ್ ತೀರ್ಮಾನಿಸಿತು. |
| 2018/11.12 | ಡಾ. ಕೆ. ಕುಮಾರ್, ಸಹಾಯಕ ಪ್ರಾಧ್ಯಾಪಕರು, ನೃತ್ಯ ವಿಭಾಗ, ವಿಶ್ವವಿದ್ಯಾನಿಲಯ ಲಲಿತಕಲಾ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಇವರಿಗೆ ಸಿಂಗಾಪೂರ್, ಮಲೇಶಿಯಾ ಮತ್ತು ಥೈಲ್ಯಾಂಡ್ ದೇಶಗಳಿಗೆ ಹೋಗಿಬರಲು ಅನುಮತಿ ನೀಡಿದ್ದ ಬಗ್ಗೆ ಅನುಸಮರ್ಥನೆಗಾಗಿ. |
| **ತೀರ್ಮಾನ** | ಡಾ. ಕೆ. ಕುಮಾರ್, ಸಹಾಯಕ ಪ್ರಾಧ್ಯಾಪಕರು, ನೃತ್ಯ ವಿಭಾಗ, ವಿಶ್ವವಿದ್ಯಾನಿಲಯ ಲಲಿತಕಲಾ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಇವರು ದಿನಾಂಕ 19–04–2018ರಿಂದ 29–04–2018ರವರೆಗೆ ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊಣೆ ಇಲ್ಲದಂತೆ ಮತ್ತು ಕಛೇರಿ ಕೆಲಸಗಳಿಗೆ ಧಕ್ಕೆಯಾಗದಂತೆ ಸಿಂಗಾಪೂರ್, ಮಲೇಶಿಯಾ ಮತ್ತು ಥೈಲ್ಯಾಂಡ್ ದೇಶಗಳಿಗೆ ಸಾಂಸ್ಕೃತಿಕ ಸಂಯೋಜಕರಾಗಿ ಭೇಟಿ ನೀಡಿರುವುದನ್ನು ಸಿಂಡಿಕೇಟ್ ಅನುಮೋದಿಸಿತು. |

| | |
|---|---|
| 2018/11.13 | ಮೈವಿವಿ ಯಲ್ಲಿ 2018–19ನೇ ಸಾಲಿನಿಂದ ದೂರ ಶಿಕ್ಷಣ ಕೋರ್ಸುಗಳ ಸಂಬಂಧ ರೂ.1,24,50,000/–ಗಳನ್ನು ಮರುಹೊಂದಾಣಿಕೆ ಮಾಡಿಕೊಂಡು ಶೀರ್ಷಿಕೆಯನ್ನು ನಿಗಧಿಗೊಳಿಸುವ ಬಗ್ಗೆ. |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯದಲ್ಲಿ 2018–19ನೇ ಸಾಲಿನ ಆಯವ್ಯಯ ಅಂದಾಜಿನಲ್ಲಿ ದೂರ ಶಿಕ್ಷಣ ಕೋರ್ಸುಗಳ ಸಂಬಂಧ ಬೇಕಾಗುವ ರೂ.1,24,50,000/–ಗಳನ್ನು ಮರುಹೊಂದಾಣಿಕೆ ಮಾಡಿಕೊಳ್ಳಲು ಹಣಕಾಸು ಸಮಿತಿಯು ಅನುಮೋದಿಸಿರುವುದನ್ನು ಸಿಂಡಿಕೇಟ್ ಸಭೆಯು ಸಹ ಅನುಮೋದಿಸಿತು. |
| 2018/11.14 | ಯುಪಿಇ ಯೋಜನೆಯ ನಿರ್ಧಿಷ್ಟ ಸಂಶೋಧನಾ ಕ್ಷೇತ್ರ–1ರ ವತಿಯಿಂದ ಡಿಸೆಂಬರ್ 2018ರಲ್ಲಿ 03 ದಿನಗಳ ಅಂತರರಾಷ್ಟ್ರೀಯ ಸಮ್ಮೇಳನವನ್ನು ಆಯೋಜಿಸಲು ಅನುಮತಿ ನೀಡುವ ಬಗ್ಗೆ. |
| **ತೀರ್ಮಾನ** | ಯುಪಿಇ ಯೋಜನೆಯ ನಿರ್ಧಿಷ್ಟ ಸಂಶೋಧನಾ ಕ್ಷೇತ್ರ–1ರ ವತಿಯಿಂದ ಡಿಸೆಂಬರ್ 2018 ರಲ್ಲಿ 03 ದಿನಗಳ ಅಂತಾರಾಷ್ಟ್ರೀಯ ಸಮ್ಮೇಳನವನ್ನು ಆಯೋಜಿಸಲು ಹಾಗೂ ಸಮ್ಮೇಳನದ ಅಂದಾಜು ವೆಚ್ಚವನ್ನು ಯುಪಿಇ ಯೋಜನೆಯ ನಿರ್ಧಿಷ್ಟ ಸಂಶೋಧನಾ ಕ್ಷೇತ್ರ–1ರ **Conference/Workshop/Seminar ಶೀರ್ಷಿಕೆ** ಮತ್ತು ಸಮಗ್ರತಾ ದೃಷ್ಟಿಯ ಅಭಿವೃದ್ಧಿ ಕಾರ್ಯಗಳಲ್ಲಿ ಒಂದು ಕ್ಷೇತ್ರವಾದ **"ಕಾರ್ಯಗಾರ ಮತ್ತು ವಿಚಾರಗೋಷ್ಠಿ" ಶೀರ್ಷಿಕೆ**ಗಳಲ್ಲಿ ಬಾಕಿ ಉಳಿದಿರುವ ಮೊತ್ತಗಳಿಂದ ಭರಿಸಲು ಸಿಂಡಿಕೇಟ್ ಅನುಮೋದಿಸಿತು. |
| 2018/11.15 | ಪ್ರೊ. ಕೆ. ತುಳಸಿಮಾಲ, ಅಧ್ಯಕ್ಷರು, ಅರ್ಥಶಾಸ್ತ್ರ ಮತ್ತು ಸಹಕಾರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು, ಇವರು ಬಳ್ಳಾರಿಯ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾನಿಲಯದ ಕುಲಸಚಿವ (ಆಡಳಿತ) ಹುದ್ದೆಗೆ ನೇಮಕಗೊಂಡಿರುವ ಸಂಬಂಧ ಬಿಡುಗಡೆಗೊಳಿಸುವ ಬಗ್ಗೆ. |
| **ತೀರ್ಮಾನ** | ಪ್ರೊ. ಕೆ.ತುಳಸಿಮಾಲ, ಅಧ್ಯಕ್ಷರು, ಅರ್ಥಶಾಸ್ತ್ರ ಮತ್ತು ಸಹಕಾರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು, ಇವರು ಬಳ್ಳಾರಿಯ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾನಿಲಯದ ಕುಲಸಚಿವ (ಆಡಳಿತ) ಹುದ್ದೆಗೆ ಸರ್ಕಾರದ ಆದೇಶದ ಅನುಸಾರ ನೇಮಕಗೊಂಡು ದಿನಾಂಕ 22–09–2018ರಂದು ಕರ್ತವ್ಯಕ್ಕೆ ವರದಿಮಾಡಿಕೊಂಡಿರುವ ಹಿನ್ನೆಲೆಯಲ್ಲಿ ಸದರಿ ಪ್ರಾಧ್ಯಾಪಕರನ್ನು ಘಟನೋತ್ತರವಾಗಿ ವಿ.ವಿ.ದ ಕರ್ತವ್ಯದಿಂದ ಬಿಡುಗಡೆಗೊಳಿಸಲು ಸಿಂಡಿಕೇಟ್ ಅನುಮೋದಿಸಿತು. |
| 2018/11.16 | ಎರಡು ಹೊಸ ವಾಹನಗಳನ್ನು ಖರೀದಿಸುವ ಬಗ್ಗೆ. |
| **ತೀರ್ಮಾನ** | ವಿಶ್ವವಿದ್ಯಾನಿಲಯದ ಉಪಯೋಗಕ್ಕಾಗಿ (1) "Honda City" Car ಮತ್ತು (2) Innova Crystal ಉನ್ನತ ದರ್ಜೆಯ ಎರಡು ವಾಹನಗಳನ್ನು **"ವಿಶ್ವವಿದ್ಯಾನಿಲಯದ ಆಂತರೀಕ ಸಂಪನ್ಮೂಲ"**ಗಳಿಂದ ನಿಯಮಾನುಸಾರ ಖರೀದಿಸಲು ಸಿಂಡಿಕೇಟ್ ತೀರ್ಮಾನಿಸಿತು. |

**ಇತರೆ ವಿಷಯಗಳು:**

1. ಪದವಿ ಕಾಲೇಜಿನ ಕೆಲವು ಪರೀಕ್ಷೆಗಳು ಮುಂದೂಡಲ್ಪಟ್ಟಿರುವುದರಿಂದ ಪದವಿ ಕಾಲೇಜಿನ 2ನೇ ಸೆಮಿಸ್ಟರ್‌ನ ಪ್ರಾರಂಭದ ದಿನಾಂಕವನ್ನು ಡಿಸೆಂಬರ್ 10, 2018ಕ್ಕೆ ನಿಗಧಿಗೊಳಿಸಲು ಸಿಂಡಿಕೇಟ್ ಅನುಮೋದಿಸಿತು.

ಕೊನೆಯಲ್ಲಿ ಸಿಂಡಿಕೇಟ್ ಸಭೆಗೆ ಆಗಮಿಸಿ ಉತ್ತಮ ಸಲಹೆಗಳನ್ನು ನೀಡಿ ಸಹಕರಿಸಿದ ಎಲ್ಲಾ ಸದಸ್ಯರಿಗೂ ಅಧ್ಯಕ್ಷರು ವಂದನೆಗಳನ್ನು ಸಲ್ಲಿಸುವುದರೊಂದಿಗೆ ಸಭೆಯು ಮುಕ್ತಾಯವಾಯಿತು.

**ಸಹಿ/–**
**ಕುಲಸಚಿವ ಮತ್ತು ಸದಸ್ಯ ಕಾರ್ಯದರ್ಶಿ**

**ಸಹಿ/–**
**ಕುಲಪತಿಗಳು ಮತ್ತು ಅಧ್ಯಕ್ಷರು**